# ಕೊನೆಗೂ ಸೋಲುವುದು ಹೆಣ್ಣು!

ಜಗದ್ವಿಖ್ಯಾತ ಪಾಪ್ ಗಾಯಕಿ ರಿಹಾನ್ನ ಹಲವಾರು ವರ್ಷ ಜೊತೆಯಲ್ಲಿ ಸಹಜೀವನ ನಡೆಸಿದ ತನ್ನ ಪ್ರಿಯಕರನಿಂದ ಇತ್ತೀಚೆಗೆ ಬೇರೆಯಾದಳು. ಅದಕ್ಕೆ ಅವಳು ನೀಡಿದ ಕಾರಣ: ಅವನು ನೀಡುತ್ತಿದ್ದ ದೈಹಿಕ ಹಾಗೂ ಮಾನಸಿಕ ಚಿತ್ರಹಿಂಸೆ! ಅವನು ಸಾಧಾರಣ ವ್ಯಕ್ತಿಯಲ್ಲ, ಪಾಪ್ ಸಂಗೀತ ಲೋಕದ ಆರಾಧ್ಯಮೂರ್ತಿ– ಕ್ರಿಸ್ ಬ್ರೌನ್! ಇಬ್ಬರಿಗೂ ಖ್ಯಾತಿ ಮತ್ತು ಸಂಪತ್ತು ಕಾಲಬುಡದಲ್ಲಿ ಬಿದ್ದಿದೆ. ಆದರೆ ಕಲೆಯ ಆರಾಧಕರಾದ ಅವರಲ್ಲಿ ಹೊಂದಾಣಿಕೆ ಬರಲಿಲ್ಲ. ಕಲೆ ಅವರನ್ನು ಪರಸ್ಪರ ಸಂವೇದನಾ ಶೀಲ ಮನೋಧರ್ಮದಲ್ಲಿ ಬೆಸೆಯಲು ವಿಫಲವಾಯಿತು. ಬಹುಶಃ ಅವರಿಗೆ ದತ್ತವಾದ ಕೀರ್ತಿ ಮತ್ತು ಸಂಪತ್ತುಗಳೇ ಕಾರಣವಾಗಿರಬೇಕು. ಇದಾದ ಕೆಲವೇ ದಿನಗಳಲ್ಲಿ ಅವಳು ದಿಗ್ಭ್ರಮೆ ಹುಟ್ಟಿಸುವ ಹೇಳಿಕೆ ನೀಡಿದಳು; 'ನನಗೆ ಕ್ರಿಸ್‌ನಿಂದ ಒಂದು ಮಗು ಪಡೆಯುವ ಆಸೆಯಿದೆ. ನಾನು ಅವನೊಡನೆ ಮತ್ತೆ ಜೀವಿಸಲು ಸಿದ್ದಳಿದ್ದೇನೆ.' ಆದರೆ ಕ್ರಿಸ್‌ಬ್ರೌನ್‌ನಿಂದ ಅವಳಿಗೆ ಉತ್ತೇಜನಕಾರಿ ಪ್ರತಿಕ್ರಿಯೆ ಬರಲಿಲ್ಲ.

ಭಾರತದಲ್ಲೂ ಅಷ್ಟೆ– ಅನೇಕ ಚಿತ್ರತಾರೆಯರು, ಗಣ್ಯ ಉದ್ಯಮಿಗಳು ಮದುವೆಯಾದ ತಮ್ಮ ಪತ್ನಿಯರನ್ನು ಬಿಟ್ಟು ಬೇರೆಯವರನ್ನು ಲಗ್ನವಾಗುತ್ತಾರೆ. ಹಾಗಂತ ತಮ್ಮ ಪತಿ ಮತ್ತೊಂದು ಮದುವೆಯಾದರೆಂದು ಅವರಿಂದ ವಿಚ್ಛೇದನ ಪಡೆದವರ ಸಂಖ್ಯೆಯೂ ಕಡಿಮೆಯೇ. ಭಾರತೀಯ ಪರಂಪರಾಗತ ಸಾಮಾಜಿಕ ವ್ಯವಸ್ಥೆಯ ಬಹು ಪತ್ನಿತ್ವದ ಅಘೋಷಿತ ಹೇರಿಕೆಯನ್ನು ಸದ್ದಿಲ್ಲದೆ ಒಪ್ಪಿಕೊಂಡುಬಿಡುವ ಪರಿಯಿದು. ಕೆಲವು ಪತಿ ಮಹಾಶಯರು ಹೆಂಡತಿಯರ ಮೇಲೆ ಅಮಾನುಷ ದೈಹಿಕ ಹಲ್ಲೆಯನ್ನು ಮತ್ತು ಮಾನಸಿಕ ಹಿಂಸೆಯನ್ನು ಸಾರ್ವಜನಿಕವಾಗಿ ಮಾಡಿ ಅವಮಾನಿಸಿರುತ್ತಾರೆ. ಇಂಥ ಕೇಸುಗಳು ಪೊಲೀಸು– ನ್ಯಾಯಾಲಯಗಳ ಮೆಟ್ಟಲೇರಿ ದೊಡ್ಡ ಸುದ್ದಿ ಮಾಡುವುದೂ ಉಂಟು. ಆದರೆ ಸ್ವಲ್ಪ ದಿನಗಳ ನಂತರ ಪೀಡಿತ ಪತ್ನಿಯರು– ತಮ್ಮ ಪೀಡಕ ಪತಿಯರ ವಿರುದ್ಧ ನೀಡಿದ್ದ ದೂರುಗಳನ್ನು ವಾಪಸ್ಸು ಪಡೆದು ಮತ್ತೆ ಅವರೊಡನೆ ಸಂಸಾರ ಮಾಡಲಾರಂಭಿಸುತ್ತಾರೆ!

ಮೇಲಿನ ಎಲ್ಲಾ ಸಂದರ್ಭಗಳಲ್ಲೂ ಬಹುಪಾಲು ಹೆಣ್ಣೇ ಸೋತು ವ್ಯವಸ್ಥೆಯ ಜೊತೆ ಹೊಂದಿಕೊಂಡು ಹೋಗುವುದು ಮಾಮೂಲು ಪ್ರಕ್ರಿಯೆಯಾಗಿದೆ. ಒಂದು ಕಾಲವಿತ್ತು: ಹೆಣ್ಣು ಹೊರಗಡೆ ದುಡಿಯಲು ಹೋಗುತ್ತಿರಲಿಲ್ಲ. ಅವಳಿಗೆ ಅವಳದೇ ಆದ ಆರ್ಥಿಕ ಸಂಪನ್ಮೂಲಗಳಿರಲಿಲ್ಲ. ಅವಳು ಜನ್ಮದಿಂದ ಹಿಡಿದು ಮರಣದವರೆಗೆ ಪರಾವಲಂಬಿಯೇ ಆಗಿರಬೇಕಾದ ಅನಿವಾರ್ಯತೆ ಸೃಷ್ಟಿಯಾಗಿತ್ತು. ಇದು ಜಗತ್ತಿನ ಹೆಚ್ಚುಕಡಿಮೆ ಎಲ್ಲ ಸಾಮಾಜಿಕ– ಧಾರ್ಮಿಕ ವ್ಯವಸ್ಥೆಗಳಲ್ಲಿ ಸಮಾನವಾಗಿ ಕಂಡುಬರುವ ಅಂಶ. ಅಲ್ಲಿ ಹೆಣ್ಣೆ ಅಧೀನೆ. ಅವಳು ಸಂತಾನ ಮುಂದುವರಿಸುವ ಸಾಧನ; ಸುಖ ನೀಡುವ ಭೋಗ ವಸ್ತು, ಸರಕು! ಸರಕು ಎಂದು ಭಾವಿಸಿದ ಮೇಲೆ ಬಳಸುವ ವಸ್ತು. ಅದರ ಪ್ರಯೋಜನ ಮುಗಿದ ನಂತರ ಅದರ ಅಸ್ತಿತ್ವಕ್ಕೆ ಬೆಲೆಯಿಲ್ಲ. ಇದು ಚರಿತ್ರೆಯುದ್ದಕ್ಕೂ ಹೆಣ್ಣನ್ನು ನಡೆಸಿಕೊಂಡು ಬಂದಿರುವ, ಕಂಡಿರುವ, ಅವಳ ಮಾನಸಿಕ ನೆಲೆಯನ್ನು ನೆಯ್ದಿರುವ ಪರಿ. ಈ ಬಗೆಯ ನೆಯ್ಗೆಯನ್ನು ಪುರುಷ ಮನಸ್ಸು ತನ್ನ ಸುಖಕ್ಕಾಗಿ ಆಚಾರ, ಸಂಪ್ರದಾಯ, ಧಾರ್ಮಿಕ ವಿಧಿ ವಿಧಾನಗಳೆಂಬ ಹುನ್ನಾರಗಳ ಮೂಲಕ ಅತ್ಯಂತ ಸೂಕ್ಷ್ಮವೂ ಸಂಕೀರ್ಣವೂ ಮನಮೋಹಕವೂ ಆಗಿರುವಂತೆ ಕುಸುರಿಸಿದೆ. ಈ ನೆಯ್ಗೆಯ ಸೂಕ್ಷ್ಮ ಮೋಹಕತೆಯಲ್ಲಿ ಹೆಣ್ಣಿನ ರಕ್ಷಣೆಯೂ ಸುಖವೂ ಅಡಗಿದೆಯೆಂದು ನಂಬಿಸಲಾಗಿದೆ. ದುರಂತವೆಂದರೆ ಆಧುನಿಕ ಕಲಿತ ಹೆಣ್ಣು ಕೂಡ ಇಂಥ ಸಾಮಾಜಿಕ ಬದುಕನ್ನು ಜೀವಿಸಲು ಅನೇಕ ಸಂದರ್ಭಗಳಲ್ಲಿ ಒಪ್ಪಿಕೊಂಡು ಬಿಡುವುದು! ಅತ್ಯಾಧುನಿಕ! ಜೀವನ ಶೈಲಿಯಿಂದ ರೂಪುಗೊಳ್ಳುತ್ತಿರುವ ಇಂದಿನ ತರುಣಿಯರು ಸದಾ ತಮ್ಮ ಬೇಕು ಬೇಡಗಳನ್ನು ಪೂರೈಸಲು ತಮ್ಮ ಬೆಂಗಾವಲಿಗೆ ರಕ್ಷಣಾ ರೂಪವಾಗಿ ಕೆಲಸ ಮಾಡುವ ತರುಣನೊಬ್ಬನನ್ನು ತಮ್ಮೊಡನೆ ಇಟ್ಟುಕೊಳ್ಳಬಯಸುತ್ತಿರುವುದನ್ನು ಈ ನೆಲೆಯಿಂದ ನಾವಿಂದು ಅಧ್ಯಯನ ಮಾಡಬೇಕಿದೆ. ಇದು ಪುರುಷನನ್ನು ತನ್ನ ಅಗತ್ಯತೆಗಳ ಪೂರೈಕೆಯ ಸೇವಕನನ್ನಾಗಿ ರೂಪಿಸುತ್ತಿದ್ದಾಳೆಂದು ವ್ಯಾಖ್ಯಾನಿಸುವುದು ತುಂಬ ಸರಳವೆಂದು ತೋರುತ್ತದೆ. ಆಧುನಿಕ ವಿದ್ಯೆಯಿಂದ ಸಬಲವಾಗುತ್ತಿರುವುದರ ಜೊತೆಗೆ ಸಂಪ್ರದಾಯ ಬದ್ಧ ನಿಯಮಗಳಿಗೆ ದಾಸಿಯಂತೆ ನಡೆದುಕೊಳ್ಳುತ್ತಿರುವ ಸ್ತ್ರೀಯರ ವರ್ತನೆಗಳನ್ನು ಮನಶಾಸ್ತ್ರೀಯ ನೆಲೆಗಳಿಂದ ವಿಶ್ಲೇಷಿಸಿ, ಲಿಂಗ ಸಮಾನತೆಯ ಅಗತ್ಯತೆಗಳತ್ತ ಅವಳನ್ನು ಚಿಂತಿಸುವಂತೆ ರೂಪಿಸಬೇಕಾಗಿದೆ. ಕೇವಲ ಆರ್ಥಿಕ ಸಬಲತೆಯೊಂದೇ ಸ್ತ್ರೀಯನ್ನು ದಾಸ್ಯದಿಂದ ಬಿಡುಗಡೆ ಮಾಡಲಾಗದು; ಅವಳು ಬೌದ್ಧಿಕವಾಗಿ ಸ್ವತಂತ್ರಳಾಗಬೇಕು. ಆಗ ರಿಹಾನ್ನಳಂಥ ಆಧುನಿಕರು ಮತ್ತೆ ಪುರುಷನ ಕ್ರೌರ್ಯಕ್ಕೆ ಅಥವಾ ಅವನ ಅಹಂ ಅನ್ನು ತೃಪ್ತಿಪಡಿಸುವ ಹುಸಿ ತೃಪ್ತಿಗೆ ಬಲಿಯಾಗರು.

ಪುರುಷನ ಮತ್ತು ತನ್ನ ಮಕ್ಕಳ ಎಲ್ಲ ಹಿಂಸೆಯನ್ನು ಸಹಿಸಿಕೊಳ್ಳುವ ಸಹನೆ ಹಾಗೂ ಅವರ ಎಲ್ಲಾ ತಪ್ಪುಗಳನ್ನು ಕ್ಷಮಿಸಿ, ಸಾಕುವ ಮಾತೃತ್ವದ ಗುಣ ಸಹಜವಾಗಿ ಹೆಣ್ಣಿಗಿದೆ. ಅದನ್ನೇ ಅವಳ ದೌರ್ಬಲ್ಯವೆಂದು ಪುರುಷ ಜಗತ್ತು ಭಾವಿಸಬಾರದು ಮತ್ತು ಆ ಗುಣವನ್ನು ಅಮೋಘವೆಂದು ವೈಭವೀಕರಿಸಿ, ಅವಳನ್ನು ಭಾವುಕಗೊಳಿಸಿ 'ಪುರುಷ ಮಾಯಾಜಾಲ'ದಲ್ಲಿ ಬೀಳಿಸಬಾರದು. ಪುರುಷನ ಚರಿತ್ರೆಯುದ್ದಕ್ಕೂ ನಡೆದು ಬಂದ ಈ ತಂತ್ರಗಾರಿಕೆಯನ್ನು ಮಹಿಳೆ ಅರ್ಥಮಾಡಿಕೊಂಡು 'ಮಾನಸಿಕವಾಗಿ' ಸೋಲುವುದರ ಬಗ್ಗೆ ಎಚ್ಚೆತ್ತುಕೊಳ್ಳಬೇಕು.

ಇಂದಿನ ಸಮಾಜಿಕ, ಸಾರ್ವಜನಿಕ ರಂಗದ ಎಲ್ಲ ಬಗೆಯ ಕರ್ತವ್ಯ ನಿರ್ವಹಣೆಯ ಪಾತ್ರಗಳನ್ನು ಮಹಿಳೆ ಯಶಸ್ವಿಯಾಗಿ ನಿರ್ವಹಿಸುತ್ತಿದ್ದಾಳೆ. ಇಂಥ ಸಂದರ್ಭದಲ್ಲಿ ಕೆಲವರಾದರೂ ಪುರುಷನ ಸಾಂಪ್ರದಾಯಿಕ ಹಿಡಿತಗಳಿಂದ ಬಿಡಿಸಿಕೊಂಡು ಬೌದ್ಧಿಕವಾಗಿ ಬೆಳೆದು ನಿಂತಿರುವುದು ಸಮಾನತೆಯ ಆಶಾಕಿರಣ.

■ **ಶಿಕಾಕು**

## ಮಾತೇ ಮುತ್ತು

★ ಹುಸಿಯದಿಹ ಹೊಲೆಯ ಉನ್ನತ ಯತಿವರನು, ಅತಿ ಹುಸಿಯಾಡುವ ಯತಿಯೇ ಹೊಲೆಯ.

–ರಾಘವಾಂಕ

★ ವಾಲ್ಮೀಕಿ ರಾಮಾಯಣದಲ್ಲಿ ಜೀವನ ದರ್ಶನವಿದೆ. ವ್ಯಾಸ ಮಹಾಭಾರತದಲ್ಲಿ ಜೀವನ ಸಂಘರ್ಷವಿದೆ. ಇವೆರಡರಿಂದ ಭಾರತೀಯ ಸಂಸ್ಕೃತಿ ಶ್ರೀಮಂತವಾಗಿದೆ.

–ಎಸ್.ಎಲ್.ಭೈರಪ್ಪ

★ ಹಣಕ್ಕೆ ಮೂರು ರೀತಿಗಳಿವೆ– 'ದಾನ', 'ಭೋಗ' ಮತ್ತು 'ನಾಶ'. ಯಾವ ಮನುಷ್ಯ 'ದಾನ' ಮಾಡುವುದಿಲ್ಲ ಮತ್ತು 'ಭೋಗಿ'ಸುವುದಿಲ್ಲವೋ ಅವನ ಹಣ 'ನಾಶ'ವಾಗುತ್ತದೆ.

–ಭತೃಹರಿ

★ ಧೈರ್ಯ, ಧರ್ಮ, ಮಿತ್ರ ಮತ್ತು ಪತ್ನಿ– ಈ ನಾಲ್ವರ ಪರೀಕ್ಷೆ ಆಪತ್ತು ಎದುರಾದಾಗ ತಿಳಿಯುತ್ತದೆ.

–ತುಲಸಿದಾಸ

★ ಕೋತಿ ತನ್ನ ಶಿಕಾರಿಗೆ ಒಪ್ಪಿಸಿಕೊಳ್ಳುವಂತೆ, ಪುರುಷ ಸುಂದರ ಸ್ತ್ರೀಗೆ ತನ್ನ ಜೀವನವನ್ನು ಅರ್ಪಿಸಿಕೊಳ್ಳುತ್ತಾನೆ.

–ರಾಮಕೃಷ್ಣ ಪರಮಹಂಸ

★ ಸುಖಾಂತ ಅಭಿನಯದಲ್ಲಿ ಕಠಿಣ ಭೂಮಿಕೆ ಮೂರ್ಖನದ್ದು. ಆದರೆ ಆ ಭೂಮಿಕೆ ನಿರ್ವಹಿಸುವವನು ಖಂಡಿತ ಮೂರ್ಖನಲ್ಲ.

–ಸರ್ವೆಂಟಿಸ್

★ ಹರಿ ಕೊಟ್ಟ ಕಾಲಕ್ಕೆ ಉಣಲಿಲ್ಲ, ಹರಿ ಕೊಡದ ಕಾಲಕ್ಕೆ ಬಾಯ ಬಿಡುವುದರಿಂದ ಪ್ರಯೋಜನವೇನು?

–ಪುರಂದರದಾಸ

★ ಕೆಟ್ಟವರನ್ನು ಹುಡುಕಲು ಹೊರಟೆ, ಯಾರೂ ಸಿಕ್ಕಲಿಲ್ಲ. ನನ್ನ ಹೃದಯದಲ್ಲಿ ತಡಕಾಡಿದೆ– ನನ್ನಂಥ ಕೆಟ್ಟವರು ಯಾರೂ ಇಲ್ಲ ಎಂದು ತಿಳಿಯಿತು.

–ಕಬೀರ

★ ವಿದ್ವತ್ತಿನ ಅಹಂಕಾರ ಎಲ್ಲಕ್ಕಿಂತ ದೊಡ್ಡ ಅಜ್ಞಾನ.

–ಟೇಲರ್

★ ಅಪಾರ ಸಂಪತ್ತು ಗುಲಾಮತನದ ಸಂಕೇತ.

–ತೀ.ನಂ.ಶ್ರೀ.